SCCH – 01
MVC No.8911/2024
PW1

**<u>ದಿನಾಂಕಃ 17.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.GS ರವರಿಂದಃ</u>**

1) ಧನುಷ್ ಈತನು ನನ್ನ ಅಣ್ಣ ಆಗಿದ್ದಾನೆ. ಯಾವ ಅಪಘಾತದಲ್ಲಿ ನನಗೆ ಗಾಯಗಳು ಆಗಿವೆಯೋ ಸದರಿ ಅಪಘಾತವನ್ನು ಧನುಷ್ ರವರು ನೋಡಿರುವುದಿಲ್ಲ.

2) ಆಸ್ಪತ್ರೆಯಿಂದ ಬಿಡುಗಡೆ ಆಗಿ ಬಂದ ನಂತರ ನಾನು ಪೋಲಿಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ ಮತ್ತು ಆ ಹೇಳಿಕೆಯ ನಕಲನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

3) ನಾನು ಐಟಿಐ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

4) ಅಪಘಾತ ಆದ ನಂತರ ನಾನು ಆಸ್ಪತ್ರೆಯಲ್ಲಿ ಇದ್ದಾಗ ನಮ್ಮ ಕುಟುಂಬದ ಸದಸ್ಯರೆಲ್ಲರು ಬಂದು ನನ್ನನ್ನು ನೋಡಿಕೊಂಡು ಹೋಗಿದ್ದಾರೆ. ಅಪಘಾತವು ಆದ ದಿನವೇ ಆ ಬಗ್ಗೆ ಪೋಲಿಸರಿಗೆ ದೂರನ್ನು ಕೊಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಅಪಘಾತವನ್ನು ಮಾಡಿದ ವಾಹನದ ಚಾಲಕನ ಹೆಸರು ನನಗೆ ಗೊತ್ತಿಲ್ಲ.

5) ಅಪಘಾತವು ಹೇಗೆ ಆಯಿತು ಎಂಬ ವಿಷಯವನ್ನು ನಾನು ವೈದ್ಯರ ಬಳಿ ಹೇಳಿದ್ದೇನೆ. ಎಂ.ಎಲ್.ಸಿ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆಯು ಇರುವುದಿಲ್ಲ.

6) **1** ನೇ ಎದುರುದಾರರು ನನಗೆ ಪರಿಚಯ ಇರುವ ವ್ಯಕ್ತಿ ಆಗಿದ್ದಾರೆ ಎಂದರೆ ಸುಳ್ಳು.

7) ಕೆಎ-**42**-ಎನ್-**6331** ಸಂಖ್ಯೆಯ ಕಾರು ಯಾವುದೇ ಅಪಘಾತವನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ಸದರಿ ಸಂಖ್ಯೆಯ ಕಾರು ಯಾವುದೇ ಅಪಘಾತವನ್ನು ಮಾಡಿಲ್ಲದೇ ಇದ್ದರೂ ಸಹಾ ಎರಡು ದಿನಗಳ ಕಾಲ ನಾನು ಮತ್ತು ಇತರರು ಸಮಾಲೋಚನೆ ಮಾಡಿ ಸದರಿ ಕೆಎ-**42**-ಎನ್-**6331** ಸಂಖ್ಯೆಯ ಕಾರು ಅಪಘಾತವನ್ನು ಮಾಡಿದೆ ಎಂದು ಸುಳ್ಳು ಕಥೆಯನ್ನು ಸೃಷ್ಟಿ ಮಾಡಿ ಪೋಲಿಸರಿಗೆ ದೂರನ್ನು ನೀಡಿದ್ದೇವೆ ಎಂದರೆ ಸುಳ್ಳು.

8) ಕೇವಲ ಪರಿಹಾರವನ್ನು ಪಡೆದುಕೊಳ್ಳಬೇಕು ಎಂಬ ಏಕೈಕ ಉದ್ದೇಶದಿಂದ ಸದರಿ ಕಾರಿನ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಎಂದರೆ ಸುಳ್ಳು.

9) ನಾನು ಕೃಷಿ ಕೆಲಸ ಮಾಡಿಕೊಂಡು ಇದ್ದೇನೆ. ನಮ್ಮ ತಂದೆಯ ಹೆಸರಿನಲ್ಲಿ

ಜಮೀನು ಇದೆ. ಇವತ್ತಿಗೂ ಸಹಾ ನಮ್ಮ ಜಮೀನಿನಲ್ಲಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಮೊದಲಿನ ಹಾಗೆ ನನಗೆ ಈಗ ಕೆಲಸ ಕಾರ್ಯಗಳನ್ನು ಸಾಧ್ಯವಾಗುತ್ತಿಲ್ಲ" ಎಂದು ನುಡಿದಿದ್ದಾರೆ.

10) ನನಗೆ ಒಂದು ತಿಂಗಳಿಗೆ **30** ಸಾವಿರ ರೂಪಾಯಿ ಆದಾಯ ಇರಲಿಲ್ಲ ಮತ್ತು ಆ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

11) ಅಪಘಾತದಲ್ಲಿ ನನಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರುವುದಿಲ್ಲ ಮತ್ತು ನನಗೆ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ನನಗೆ ಕೇವಲ ಸಣ್ಣ ಪುಟ್ಟ ಗಾಯಗಳು ಆಗಿದ್ದವು ಮತ್ತು ನನ್ನ ಅನುಕೂಲಕ್ಕಾಗಿ ನಾನು ನಿ.ಪಿ.**12** ದಾಖಲೆಯನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

12) ನನ್ನ ಚಿಕಿತ್ಸೆಗಾಗಿ **3** ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂದು ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು. ನನಗೆ ಆಗಿದ್ದಂತಹ ಗಾಯಗಳ ಚಿಕಿತ್ಸೆಗೆ ನಾನು ಹೇಳುವಷ್ಟು ಹಣ ಖರ್ಚು ಆಗಲು ಸಾಧ್ಯವಿಲ್ಲ ಮತ್ತು ಕೇವಲ ನನ್ನ ಅನುಕೂಲಕ್ಕಾಗಿ ನಿ.ಪಿ.**13**

ದಾಖಲೆಯನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

13) ಅಪಘಾತದ ಸಮಯದಲ್ಲಿ ನನಗೆ **31** ವರ್ಷ ವಯಸ್ಸು ಆಗಿತ್ತು ಎಂದರೆ **28** ವರ್ಷ ಆಗಿತ್ತು.

14) ಅಪಘಾತವು ಆದ ದಿನದಂದು ಹೆಲ್ಮೆಟ್ ಧರಿಸದೇ ನಾನು ನನ್ನ ವಾಹನವನ್ನು ಚಾಲನೆ ಮಾಡುತ್ತಿದ್ದೆನು ಎಂದರೆ ಸುಳ್ಳು. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ ಮತ್ತು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.